**ಓ.ಎಸ್. ನಂ. 43/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 29.11.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಕೆ.ಜಿ ವಕೀಲರಿಂದಃ</u>**

ನಾನು ಎಂ.ಕಾಂ ಪಿ.ಹೆಚ್.ಡಿ ಮಾಡಿರುತ್ತೇನೆ. ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡಿದ್ದು, ಈಗ ನಿವೃತ್ತಿಯಾಗಿರುತ್ತೇನೆ. ನಾನು ಈ ದಾವೆ ಸಲ್ಲಿಸುವ ಸಮಯದಲ್ಲಿ ಮೈಸೂರಿನ ವಿಳಾಸ ನೀಡಿರುತ್ತೇನೆ ಎಂದರೆ ಸರಿ. ನನ್ನ ಮಗಳು ಕೋಲಾರದಲ್ಲಿ ಅಂತಿಮ ವರ್ಷದ ಜನರಲ್ ಸರ್ಜರಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾಳೆ. ಪ್ರತಿವಾದಿಯರು ನನಗೆ 1 ನೇ ಪ್ರತಿವಾದಿಯ ಸೋದರ ಮಾವನಾದ ಬಸವರಾಜು ರವರ ಮೂಲಕ ಪರಿಚಯವಾಗಿರುತ್ತಾರೆ. ಸದರಿ ಬಸವರಾಜು ನನಗೆ 10 ವರ್ಷಗಳಿಂದ ಪರಿಚಯಸ್ಥರಾಗಿರುತ್ತಾರೆ. ನನ್ನ ಸಹೋದ್ಯೋಗಿಯಾದ ಸುರೇಶ್ ರವರು ಆಲನಹಳ್ಳಿ ಗ್ರಾಮದವರಾಗಿದ್ದು ಅವರ ಮೂಲಕ ಸದರಿ ಬಸವರಾಜು ಪರಿಚಯವಾಗಿರುತ್ತಾರೆ. ಮೈಸೂರಿನಿಂದ ಆಲನಹಳ್ಳಿ ಗ್ರಾಮ 20 ಕಿ.ಮೀ ದೂರದಲ್ಲಿರುತ್ತದೆ. ಸದರಿ ಬಸವರಾಜುರವರು ಪ್ರತಿವಾದಿಯರನ್ನು 2021 ನವೆಂಬರ್ ನಲ್ಲಿ ನನಗೆ ಪರಿಚಯ ಮಾಡಿರುತ್ತಾರೆ. ಪ್ರತಿವಾದಿಯರ ಮನೆಯಲ್ಲಿ ಎಷ್ಟು ಜನ ಸಹೋದರ ಸಹೋದರಿ ಇರುತ್ತಾರೆ ಎಂದು ನಿಮಗೆ ತಿಳಿದಿರುತ್ತದಾ ಎಂದರೆ ಸಾಕ್ಷಿದಾರರು 1 ನೇ ಪ್ರತಿವಾದಿಗೆ ಮೂರು ಜನ ಸಹೋದರಿಯರು ಒಬ್ಬ ಸಹೋದರ ಇರುವ ಬಗ್ಗೆ ಗೊತ್ತಾಗಿರುತ್ತದೆ ಎನ್ನುವರು. 1 ನೇ ಪ್ರತಿವಾದಿಗೆ ಇಬ್ಬರು ಮಕ್ಕಳು ಇರುತ್ತಾರೆ ಎಂದು ಹೇಳಿರುತ್ತಾರೆ. ಅವರ ಪೈಕಿ ಒಬ್ಬಳು ಹೆಣ್ಣು ಮಗಳು. ಸದರಿ ಹೆಣ್ಣು ಮಗಳು ಆ ಸಮಯದಲ್ಲಿ ಪಿ.ಯು.ಸಿ ಓದುತ್ತಿದ್ದಳು. ಪ್ರತಿವಾದಿಯರ ವಂಶವೃಕ್ಷವನ್ನು ನಾನು ಕೇಳಿದ್ದು ಅವರು ನೀಡಿರುವುದಿಲ್ಲ. 1 ನೇ ಪ್ರತಿವಾದಿಯ ಸಹೋದರ ಸಹೋದರಿಯರು ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯನ್ನು ನನಗೆ ಬಸವರಾಜು ಹಾಗೂ 1 ನೇ ಪ್ರತಿವಾದಿಯು ನವೆಂಬರ್ 2021 ರಲ್ಲಿ ತೋರಿಸಿರುತ್ತಾರೆ. ಸದರಿ ಸಮಯದಲ್ಲಿ ನಾನು ಆಸ್ತಿಯ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ಅವರಿಗೆ ಸಂಬಂಧಪಟ್ಟ ಹಳೆಯ ಪಹಣಿ, ಕಂದಾಯ ರಶೀದಿ, ನೋಟರಿ ಪ್ರಮಾಣೀಕೃತ ವಂಶವೃಕ್ಷ, ದಾನಪತ್ರದ ನಕಲನ್ನು ಪಡೆದುಕೊಂಡಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಆಸ್ತಿಯ ಪಹಣಿಯನ್ನು ನೋಡಿದಾಗ ಆಲನಹಳ್ಳಿಯ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಸುಮಾರು 8 ಲಕ್ಷ ಸಾಲ ಇರುವ ಬಗ್ಗೆ ಗೊತ್ತಾಗಿರುತ್ತದೆ. ಆಸ್ತಿಯ ಇ.ಸಿ ಯನ್ನು ಪ್ರತಿವಾದಿಯರು ನೀಡಿದ್ದು, ಅದರಲ್ಲಿ ಸಹ ಸಾಲದ ಬಗ್ಗೆ ನಮೂದು ಇತ್ತು. ಸದರಿ ಇ.ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಇ.ಸಿ ಯನ್ನು ನಾನು ಪ್ರತಿವಾದಿಯರಿಂದ ಪಡೆದುಕೊಂಡಿರುವುದಿಲ್ಲ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಪಡೆದುಕೊಂಡ ನಂತರ ಕಾನೂನು ಅಭಿಪ್ರಾಯವನ್ನು ಮೌಖಿಕವಾಗಿ ಪಡೆದುಕೊಂಡಿರುತ್ತೇನೆ.

ನಿಪಿ1 ಕರಾರುಪತ್ರವನ್ನು ಬೀರನಾಯಕ, ವಕೀಲರು ತಯಾರಿಸಿರುತ್ತಾರೆ. ಆಸ್ತಿಯ ಮಾತುಕತೆಯು ಫೆಬ್ರವರಿ 2022 ರಲ್ಲಿ ಬಸವರಾಜು ರವರ ಮನೆಯಲ್ಲಿ ಆಗಿರುತ್ತದೆ. ಮಾತುಕತೆಯಾದಾಗ ಪ್ರತಿವಾದಿಯರು, ನಾನು, ಬಸವರಾಜು ಮತ್ತು ನಟೇಶ ಎಂಬುವವರು ಇದ್ದೆವು. ಬಸವರಾಜು ರವರ ಮನೆಯು ಆಲನಹಳ್ಳಿ ಗ್ರಾಮದ ಮಧ್ಯ ಭಾಗದಲ್ಲಿರುತ್ತದೆ. ಸದರಿ ಮಾತುಕತೆಯಲ್ಲಿ ನಾನು ಒಟ್ಟು 30 ಲಕ್ಷಕ್ಕೆ ಆಸ್ತಿಯನ್ನು ಕೇಳಿದ್ದು, ಪ್ರತಿವಾದಿಯರು 32 ಲಕ್ಷ ಕೇಳಿರುತ್ತಾರೆ. ಮಾತುಕತೆಯಾದ ದಿನವೇ ನಾನು 50 ಸಾವಿರ ಮುಂಗಡವನ್ನು ಪ್ರತಿವಾದಿಯರಿಗೆ ನೀಡಿರುತ್ತೇನೆ. ಮಾತುಕತೆಯಾದ ದಿನ ಇದ್ದ ನಟೇಶ ರವರು ಕರಾರುಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಮಾತುಕತೆಯಾದ 2 ತಿಂಗಳ ನಂತರ ದಿನಾಂಕ 11.4.2022 ರಂದು ಕರಾರುಪತ್ರ ಆಗಿರುತ್ತದೆ. ನಿಪಿ1 ಕರಾರಿಗೆ ಸಹಿ ಮಾಡಿರುವ ಮೋಹನ್‌ಕುಮಾರ್ ರವರು ನೋಂದಣಿ ಕಛೇರಿಯಲ್ಲಿ ಕೆಲಸ ಮಾಡುತ್ತಾರೆ. ಸದರಿ ಮೋಹನ್‌ಕುಮಾರ್ ರವರಿಗೆ ಆಸ್ತಿಯ ಮಾತುಕತೆಯ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿದಾರರು ಎಲ್ಲ ವಿಚಾರವನ್ನು ನಾನು ಅವರಿಗೆ ತಿಳಿಸಿದ ನಂತರ ಅವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎನ್ನುವರು. ಸದರಿ ದಿನ ನಾನು ನೊಂದಣಿಯಾದ ಒಂದು ದಾಖಲೆಗೆ ಮಾತ್ರ ಸಹಿ ಮಾಡಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ದಾಖಲೆಗೆ ಸಹಿ ಮಾಡಿರಬಹುದು, ಗೊತ್ತಿರುವುದಿಲ್ಲ. ನಾನು ಯಾವುದೇ ಟೈಪ್ ಮಾಡದ ಖಾಲಿ ಪತ್ರಕ್ಕೆ ಸಹಿ ಮಾಡುವುದಿಲ್ಲ. ಮಾತುಕತೆಯಾದ ನಂತರ ನಿಪಿ1 ದಾಖಲೆಯಾಗುವ ಮೊದಲು ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿರುವುದಿಲ್ಲ, ನಿಪಿ1 ದಾಖಲೆಯಾದ ನಂತರ ಮಾಡಿರುತ್ತೇನೆ. ಯಾವುದೇ ಆಸ್ತಿ ಖರೀದಿಸಬೇಕಾದರೆ ಮೊದಲು ಎಲ್ಲ ದಾಖಲೆಯನ್ನು ಪಡೆದುಕೊಂಡು, ಕಾನೂನು ಅಭಿಪ್ರಾಯ ಪಡೆದು, ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿ ನಂತರ ಕರಾರುಪತ್ರ ಮಾಡಿಕೊಳ್ಳಬೇಕು ಎಂದರೆ ಇರಬಹುದು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.